# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **424** |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿದ್ಯುತ್ ವಿತರಣಾ ಜಾಲಗಳ ತಂತಿಗಳ ಕಂಬಗಳನ್ನು ಅಳವಡಿಸುವಾಗ ಸಂಬಂಧಪಟ್ಟ ಜಾಗದ ಮಾಲೀಕರಲ್ಲಿ ಸಮನ್ವಯ ಮಾಡಲಾಗುತ್ತಿದೆಯೇ; ಈ ಕುರಿತಂತೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿವಿಧ ಸಂತ್ರಸ್ಥರು ಪ್ರತಿಭಟನೆ ಮಾಡಿರುವ ಪ್ರಕರಣಗಳಲ್ಲಿ ಯಾವ ರೀತಿ ಕ್ರಮ ವಹಿಸುತ್ತಿದೆ; | ರಾಜ್ಯದಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಜಾಲವನ್ನು ರಚಿಸುವ ಸಮಯದಲ್ಲಿ ಮೂಲಭೂತ ಸೌಕರ್ಯಗಳಾದ ವಿದ್ಯುತ್ ಕಂಬ, ವಿದ್ಯುತ್ ಪರಿವರ್ತಕ, ವಿದ್ಯುತ್ ಮಾರ್ಗಗಳು ಇತ್ಯಾದಿಗಳನ್ನು ಸುರಕ್ಷತಾ ನಿಯಮಗಳನ್ನು ಪಾಲಿಸಿ, ರಸ್ತೆಗಳ ಪಕ್ಕದಲ್ಲಿ ಅಳವಡಿಸಲಾಗಿರುತ್ತದೆ.<br>ಕಾರ್ಯಸಾಧ್ಯತಾ ವರದಿಯಂತೆ ತಯಾರಿಸಿರುವ ಅಂದಾಜು ಪಟ್ಟಿಯಲ್ಲಿ ಅತೀ ಅವಶ್ಯಕವೆಂದು ಕಂಡು ಬಂದ ಸ್ಥಳಗಳಲ್ಲಿ ಮಾತ್ರ Electricity Act,2003 ಮತ್ತು Indian Telegraphy Act, 1885ನ ಅನುಸಾರ ಹಾಗೂ ಖಾಸಗಿ ಜಾಗದ ಮಾಲೀಕರ ಸಮನ್ವಯದೊಂದಿಗೆ ಸುರಕ್ಷತಾ ನಿಯಮಗಳನ್ನು ಪಾಲಿಸಿ (Horizontal and Vertical clearance) ವಿದ್ಯುತ್ ಕಂಬಗಳನ್ನು ಅಳವಡಿಸಲಾಗುತ್ತಿದೆ.<br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಉಡುಪಿ ಕಾಸರಗೋಡು ವಿತರಣಾ ಜಾಲದ ಅಳವಡಿಕೆಗೆ ಸಂತ್ರಸ್ಥರು ಪ್ರತಿಭಟನೆ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರವು ಅನುಷ್ಠಾನಗೊಳಿಸಿರುತ್ತದೆ. ಆದಾಗ್ಯೂ, ರಾಜ್ಯ ಸರ್ಕಾರವು ಸಂಬಂಧಪಟ್ಟ ಚುನಾಯಿತ ಜನಪ್ರತಿನಿಧಿಗಳು ಮತ್ತು ರೈತ ಮುಂಖಡರ ಜೊತೆ ಸಮಾಲೋಚನೆ ನಡೆಸಲಾಗಿರುತ್ತದೆ. |
| ಆ) | ವಿದ್ಯುತ್ ವಿತರಣ ನಿಗಮಗಳು ಸಾರ್ವಜನಿಕ ರಸ್ತೆ, ಕಟ್ಟಡ ಮನೆ ಹಾಗೂ ಕೃಷಿ ತೋಟದ ಮೂಲಕ ವಿದ್ಯುತ್ ತಂತಿ ಹಾದು ಹೋಗುವಾಗ ಯಾವುದೇ ಮುನ್ಸೂಚನೆ ನೀಡದೆ ಕಂಬ ಅಳವಡಿಸಿ ನಂತರ ತೆರವುಗೊಳಿಸಬೇಕಾದಲ್ಲಿ ಇತರ ಇಲಾಖೆಗಳ ಸಹಿತ ಸಂಬಂಧಪಟ್ಟವರಿಂದ ದುಭಾರಿ ಶುಲ್ಕ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣಾ ಜಾಲಗಳ ತಂತಿ ಹಾಗೂ ಕಂಬಗಳನ್ನು ಅಳವಡಿಸುವಾಗ ಸಾಧ್ಯವಾದಷ್ಟು ರಸ್ತೆ ಪಕ್ಕದ Utility Corridor ನಲ್ಲಿ ಮತ್ತು ಸರ್ಕಾರಿ ಜಾಗದಲ್ಲಿಯೇ ಅಳವಡಿಸಲಾಗುತ್ತಿದ್ದು, ಇತರೆ ಪರ್ಯಾಯಗಳು ಇಲ್ಲದೇ ಖಾಸಗಿ ಮಾಲೀಕರ ಜಾಗದಲ್ಲಿಯೇ ವಿದ್ಯುತ್ ಮಾರ್ಗಗಳು ಹಾದು ಹೋಗಬೇಕಾದ ಸಂದರ್ಭದಲ್ಲಿ ಸದರಿ ಮಾಲೀಕರ ಸಮನ್ವಯದೊಂದಿಗೆ ನಿಯಮಾನುಸಾರ ಕಾಮಗಾರಿ ನಿರ್ವಹಿಸಲಾಗುತ್ತಿದೆ. ವಿದ್ಯುತ್ ಕಂಬಗಳನ್ನು ಮತ್ತು ತಂತಿಗಳನ್ನು ಯಾವುದೇ ಕಟ್ಟಡದ ಮೇಲೆ ಅಳವಡಿಸಲಾಗುವುದಿಲ್ಲ.<br>ಖಾಸಗಿ ಕಟ್ಟಡ ಮನೆ ಹಾಗೂ ಕೃಷಿ ತೋಟಗಳನ್ನು ಈಗಾಗಲೇ ರಚಿಸಲಾದ ವಿದ್ಯುತ್ ಮಾರ್ಗದ ಕೆಳಗೆ ನಿರ್ಮಿಸಿದಲ್ಲಿ/ಬೆಳೆದಲ್ಲಿ ಇಲಾಖಾ ನಿಯಮದಂತೆ ಅರ್ಜಿದಾರರ ಕೋರಿಕೆಯ ಮೇರೆಗೆ ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿ ವಿಸಕಂ ಗಳ ಅಂದಾಜುಪಟ್ಟಿಯಂತೆ, ಅಂದಾಜುಪಟ್ಟಿಯ 5% ಮೇಲ್ವಿಚಾರಣಾ ಶುಲ್ಕ ಪಾವತಿಸಿ, ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಮೂಲಕ ವಿದ್ಯುತ್ ಸರಬರಾಜು ಕಂಪನಿಗಳ ಮೇಲ್ವಿಚಾರಣೆಯಲ್ಲಿ ಕಾಮಗಾರಿ ನಿರ್ವಹಿಸಬೇಕಾಗಿರುತ್ತದೆ. |

| | | |
|---|---|---|
| ಇ) | ವಿದ್ಯುತ್ ತಂತಿ ಮತ್ತು ಕಂಬಗಳ ಸ್ಥಳಾಂತರ ಕಾಮಗಾರಿಯನ್ನು ಇಲಾಖೆಯೇ ಮಾಡುತ್ತಿದೆಯೇ; ಅಥವಾ ಗುತ್ತಿಗೆದಾರರಿಂದ ಮಾಡಲಾಗುತ್ತಿದೆಯೇ; ಇವುಗಳ ಕುರಿತ ನಿಯಮಗಳಾವುವು; | ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿ ಮತ್ತು ಕಂಬಗಳ ಸ್ಥಳಾಂತರ ಕಾಮಗಾರಿಗಳ ನಿಯಮಾವಳಿಗಳು ಈ ಕೆಳಕಂಡಂತೆ ಇರುತ್ತವೆ.<br>1. ಅಪಾಯಕಾರಿ ಸ್ಥಿತಿಯಲ್ಲಿರುವ ವಿದ್ಯುತ್ ಕಂಬಗಳು ಹಾಗೂ ವಿದ್ಯುತ್ ತಂತಿಗಳನ್ನು ಸ್ಥಳಾಂತರಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಇಲಾಖೆ ವತಿಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.<br>2. ಒಂದು ವೇಳೆ ಈಗಾಗಲೇ ರಚಿಸಿದ ವಿದ್ಯುತ್ ಮಾರ್ಗಗಳ ಕೆಳಗೆ ಕಟ್ಟಡಗಳನ್ನು ರಚಿಸಿದಲ್ಲಿ/ಮರಗಳನ್ನು ಬೆಳೆಸಿದಲ್ಲಿ, ಅಂತಹ ಅರ್ಜಿದಾರರು ವಿದ್ಯುತ್ ತಂತಿ ಮತ್ತು ಕಂಬಗಳ ಸ್ಥಳಾಂತರ ಮಾಡುವುದಕ್ಕೆ ವಿ.ಸ.ಕಂಪನಿಗಳ ಕಚೇರಿಗೆ ಅರ್ಜಿಯನ್ನು ಸಲ್ಲಿಸುವಾಗ ಅರ್ಜಿಯಲ್ಲಿ ನಿರ್ದಿಷ್ಟವಾಗಿ ಸ್ವಯಂ ಕಾರ್ಯನಿರ್ವಹಣೆ ಯೋಜನೆ (Self-Execution Works) ಅಥವಾ ಡಿಪಾಸಿಟ್ ಕಾಂಟ್ರಿಬ್ಯೂಷನ್ ವರ್ಕ್ಸ್ (Deposit Contribution Works) ಎಂದು ನಮೂದಿಸಬೇಕು. ಅರ್ಜಿಯನ್ನು ಆಧರಿಸಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಸಂಬಂಧಪಟ್ಟ ಕಾಮಗಾರಿಗೆ ತಗಲುವ ವೆಚ್ಚದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತದೆ ಮತ್ತು ಅಗತ್ಯ ಸಹಕಾರ ನೀಡಲಾಗುತ್ತದೆ.<br>3. ಒಂದು ವೇಳೆ ಕಾಮಗಾರಿಯು ಸ್ವಯಂ ಕಾರ್ಯನಿರ್ವಹಣೆ ಯೋಜನೆ ಆಗಿದ್ದಲ್ಲಿ ಅರ್ಜಿದಾರರು ಅಂದಾಜು ಪಟ್ಟಿಯ ಒಟ್ಟು ಮೊತ್ತದ ಪೈಕಿ 5% ರಷ್ಟು ಮೇಲ್ವಿಚಾರಣೆ ಶುಲ್ಕವನ್ನು ಪಾವತಿಮಾಡಿ, ಕಾರ್ಯಾದೇಶ ಪಡೆದು, ಸಂಬಂಧಪಟ್ಟ ಕಾಮಗಾರಿಯನ್ನು ಕರ್ನಾಟಕ ಸರ್ಕಾರದಿಂದ ಅನುಮತಿ ಪಡೆದ ಕ್ಲಾಸ್-1 ವಿದ್ಯುತ್ ಗುತ್ತಿಗೆದಾರರಿಂದ ಹಾಗೂ ವಿ.ಸ.ಕಂಪನಿಗಳ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಾಮಗಾರಿ ನಡೆಯುತ್ತದೆ.<br>4. ಒಂದು ವೇಳೆ ಕಾಮಗಾರಿಯು ಡಿಪಾಸಿಟ್ ಕಾನ್ಟ್ರಿಬ್ಯುಷನ್ ವರ್ಕ್ಸ್ (Deposit Contribution Works) ಆಗಿದಲ್ಲಿ, ಅರ್ಜಿದಾರರು ಅಂದಾಜು ಪಟ್ಟಿಯ ಸಂಪೂರ್ಣ ಮೊತ್ತವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸುತ್ತಾರೆ. ಅಂದಾಜು ಪಟ್ಟಿಯ ಸಂಪೂರ್ಣ ಮೊತ್ತವನ್ನು ಪಾವತಿಸಿದ ನಂತರ, ವಿ.ಸ.ಕಂಪನಿಗಳ ಅಧಿಕಾರಿಗಳು ಸೂಕ್ತ ಕಾರ್ಯಾದೇಶ ನೀಡಿ ಅನುಮತಿ ಪಡೆದ ಕ್ಲಾಸ್-1 ವಿದ್ಯುತ್ ಗುತ್ತಿಗೆದಾರರಿಗೆ ವರ್ಕ್ ಅವಾರ್ಡ್ ನೀಡಿ, ಕಾಮಗಾರಿಯನ್ನು ಪೂರ್ಣಗೊಳಿಸುತ್ತಾರೆ. |
| ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿದ್ಯುತ್ ವಿತರಣ ಜಾಲಗಳ ತಂತಿಗಳು ಸಾರ್ಜನಿಕ ರಸ್ತೆ, ಶಾಲೆ, ಅಂಗನವಾಡಿ ಹಾಗೂ ಇತರ ಕಚೇರಿಗಳ ಮೇಲೆಯಿಂದ ಹಾದು ಹೋಗುವ ಸಂದರ್ಭದಲ್ಲಿ, ತಂತಿಗಳ ಅಡಿಯಲ್ಲಿ ಸುರಕ್ಷಿತ ಗಾರ್ಡ್‌ಗಳನ್ನು ಅಳವಡಿಸಲಾಗಿದೆಯೇ; ಅಳವಡಿಸಿದ್ದರೆ ಅವುಗಳ ಸಂಖ್ಯೆಷ್ಟು; ಈ ಕುರಿತು ಇಲಾಖೆಗೆ ಸಲ್ಲಿಸಿದದ ಮನವಿಗಳಲ್ಲಿ ಎಷ್ಟನ್ನು | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ರಸ್ತೆ, ಶಾಲೆ, ಅಂಗನವಾಡಿ ಹಾಗೂ ಇತರ ಕಚೇರಿಗಳಿಂದಸೂಕ್ತ ಅಂತರವನ್ನು ಕಾಯ್ದುಕೊಂಡು ಅಗತ್ಯ ಸುರಕ್ಷತಾ ನಿಯಮಗಳನ್ನು ಪಾಲಿಸಿ ವಿದ್ಯುತ್ ಮಾರ್ಗಗಳನ್ನು ನಿರ್ಮಿಸಲಾಗುತ್ತಿದೆ.<br>ಹಾಲಿ ಇರುವ ವಿದ್ಯುತ್ ಮಾರ್ಗದ ಕೆಳಗೆ, ನಂತರದ ದಿನಗಳಲ್ಲಿ ಶಾಲೆ, ಅಂಗನವಾಡಿಗಳು ನಿರ್ಮಾಣವಾಗಿದ್ದಲ್ಲಿ ವಿದ್ಯುತ್ ವಿತರಣಾ ತಂತಿಗಳನ್ನು ಸುರಕ್ಷತೆಯ ದೃಷ್ಟಿಯಿಂದ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.<br>ವಿದ್ಯುತ್ ಮಾರ್ಗದ ಅಡಿಯಲ್ಲಿ ಕಛೇರಿಗಳನ್ನು ನಿರ್ಮಿಸಿದ್ದಲ್ಲಿ ಇಲಾಖಾ ನಿಯಮದಂತೆ ಸ್ವಯಂ ನಿರ್ವಹಣಾ ಯೋಜನೆಯಡಿ ಅಂದಾಜುಪಟ್ಟಿ ತಯಾರಿಸಿ, ಅಂದಾಜುಪಟ್ಟಿಯ 5% ಮೇಲ್ವಿಚಾರಣಾ ಶುಲ್ಕ ಪಾವತಿಸಿ, ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಮೂಲಕ ಮೆಸ್ಕಾಂ ಮೇಲ್ವಿಚಾರಣೆಯಲ್ಲಿ ಕಾಮಗಾರಿ ನಿರ್ವಹಿಸಬೇಕಾಗಿರುತ್ತದೆ.<br>ಸಾರ್ವಜನಿಕ ರಸ್ತೆಯ ಮಧ್ಯದಲ್ಲಿ ಹಾದು ಹೋಗುವ ಹೆಚ್.ಟಿ. / ಎಲ್.ಟಿ. ತಂತಿಗಳ ಅಡಿಯಲ್ಲಿ ಸುರಕ್ಷಿತ ಗಾರ್ಡ್ ಗಳನ್ನು ಅಳವಡಿಸಲಾಗುತ್ತಿದೆ.<br>ಉಳಿದ ಸಂದರ್ಭದಲ್ಲಿ ಹೆಚ್.ಟಿ / ಎಲ್.ಟಿ ಮಾರ್ಗಗಳಿಂದ ಸುರಕ್ಷತಾ ಅಂತರವನ್ನು ವಿದ್ಯುತ್ ಕಾಯ್ದೆಯ ನಿಯಮಾನುಸಾರ ಕಾಯ್ದುಕೊಳ್ಳಲಾಗುತ್ತಿದೆ. |

| | | |
|---|---|---|
| | ಪರಿಗಣಿಸಿದೆ; (ಅಂಕಿ ಅಂಶ ಸಹಿತ ವಿವರ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಾರ್ವಜನಿಕ ರಸ್ತೆಗಳಲ್ಲಿ ಹಾದು ಹೋಗುವ ತಂತಿಗಳ ಅಡಿಯಲ್ಲಿ **3396** ಸಂಖ್ಯೆಯ ಸುರಕ್ಷಿತ ಗಾರ್ಡ್‌ಗಳನ್ನು ಅಳವಡಿಸಲಾಗಿದೆ.<br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸುರಕ್ಷಿತ ಗಾರ್ಡ್‌ಗಳನ್ನು ಅಳವಡಿಸಲು ಸಾರ್ವಜನಿಕರಿಂದ ಯಾವುದೇ ಮನವಿ ಬಂದಿರುವುದಿಲ್ಲ. |
| ಉ) | ಖಾಸಗಿ ಸ್ಥಳಗಳಲ್ಲಿ ಅಪಾಯಕಾರಿ ಕಟ್ಟಡ, ಮರ ತೆರವುಗೊಳಿಸುವಾಗ ವಿದ್ಯುತ್ ತಂತಿ ಕೆಳಗಿಳಿಸಲು ಅನುಸರಿಸಬೇಕಾದ ನಿಯಮಗಳು, ಪಾವತಿಸಬೇಕಾದ ಶುಲ್ಕ ಇತ್ಯಾದಿಗಳ ವಿವರಗಳೇನು? | ಖಾಸಗಿ ಸ್ಥಳಗಳಲ್ಲಿ ಅಪಾಯಕಾರಿ ಕಟ್ಟಡ, ಮರ ತೆರವುಗೊಳಿಸುವಾಗ ತೆರವುಗೊಳಿಸುವ ಸಂದರ್ಭದಲ್ಲಿ ಮೆಸ್ಕಾಂ ವತಿಯಿಂದ ವಿದ್ಯುತ್ ಮಾರ್ಗ ನಿಲುಗಡೆ ನೀಡಿ ಅಗತ್ಯ ಕ್ರಮಗಳನ್ನು ಕೈಗೊಂಡು ಸಹಕರಿಸಲಾಗುತ್ತಿದೆ.<br>ಮೇಲಿನ ಪ್ರಕರಣಗಳಲ್ಲಿ ವಿದ್ಯುತ್ ಮಾರ್ಗ ಸ್ಥಳಾಂತರಿಸಬೇಕಾದಲ್ಲಿ ಇಲಾಖಾ ನಿಯಮದಂತೆ ಸ್ವಯಂ ನಿರ್ವಹಣಾ ಯೋಜನೆಯಡಿ ಅಂದಾಜುಪಟ್ಟಿ ತಯಾರಿಸಿ, ಅಂದಾಜುಪಟ್ಟಿಯ 5% ಮೇಲ್ವಿಚಾರಣಾ ಶುಲ್ಕ ಪಾವತಿಸಿ, ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಮೂಲಕ ಕಾಮಗಾರಿ ನಿರ್ವಹಿಸಬೇಕಾಗಿರುತ್ತದೆ. |

ಸಂಖ್ಯೆ: ಎನರ್ಜಿ 46 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು